ಓ.ಎಸ್. ನಂಬರ 39/2019

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 24-01-2024.

**ಮುಂದುವರೆದ ಪಾಟೀ ಸವಾಲು ಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ. ಬಿ.ಎಫ್.ಪಿ. ವಕೀಲರಿಂದಃ**

2 ನೇ ಪ್ರತಿವಾದಿಯರು ಈ ಮೊದಲು 2004 ನೇ ಇಸ್ವಿಯಲ್ಲಿ ಮಾಡಿಕೊಟ್ಟಂತಹ ಜಿಪಿಎ ಊರ್ಜಿತದಲ್ಲಿ ಇದ್ದರೂ ಸಹ ದಿಃ 09-09-2017 ರಂದು ಮತ್ತೊಂದು ಜಿಪಿಎ ನ್ನು ಬರೆಸಿಕೊಂಡಿರುತ್ತೇನೆ ಎಂದರೆ ನಿಜ. 2004 ನೇ ಇಸ್ವಿಯಲ್ಲಿನ ಜಿಪಿಎ ಊರ್ಜಿತದಲ್ಲಿ ಇದ್ದರೂ ದಿಃ 09-09-2017 ನೇದ್ದರ ಜಿಪಿಎ ನ್ನು ಏಕೆ ಮಾಡಿಸಿಕೊಂಡಿರುತ್ತಿರಿ ಎಂದರೆ ಸಾಕ್ಷಿಯು ನಾನು ಮಾಡಿಸಿಕೊಂಡಿಲ್ಲ, 2 ನೇ ಪ್ರತಿವಾದಿಯರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದ್ರಿ ಎರಡೂ ಜಿಪಿಎ ಗಳಲ್ಲಿ 2 ನೇ ಪ್ರತಿವಾದಿಯರೇ ದಾವಾಸ್ತಿಯ ಸ್ವಂತ ಕಬಜೆ ವಹಿವಾಟಿನಲ್ಲಿ ಇರುತ್ತೇನೆಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸದ್ರಿ ಜಿಪಿಎ ಗಳನ್ನು ಓದಿ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದ್ರಿಯವುಗಳನ್ನು ಓದಿಸಿ ತಿಳಿದುಕೊಳ್ಳಲು ಸಹ ಪ್ರಯತ್ನಿಸಿರುವುದಿಲ್ಲ. ಸದ್ರಿ ಜಿಪಿಎ ಗಳನ್ನು 2 ನೇ ಪ್ರತಿವಾದಿಯರು ದಾವಾಸ್ತಿಗಳಲ್ಲಿ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಹೋಗಲು ಮಾತ್ರ ಅಧಿಕಾರವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಜಮೀನುಗಳಿಗೆ ಸಂಬಂಧಿಸಿ ಬಾಂಕಿನಲ್ಲಿ ಮತ್ತು ಸೊಸ್ಾಯಟಿಗಳಲ್ಲಿ ಸಾಲ ಪಡೆಯಲು ಸಹ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಎರಡೂ ಜಿಪಿಎ ಗಳಲ್ಲಿ 2 ನೇ ಪ್ರತಿವಾದಿಯರು ದಾವಾಸ್ತಿಯ ಕಬಜೆಯನ್ನು ಬಿಟ್ಟುಕೊಟ್ಟಿರುತ್ತೇವೆ ಎಂದು ಎಲ್ಲಿಯೂ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಪುನಃ ನಾನು ಸದ್ರಿಯವುಗಳನ್ನು ಓದಿ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. 2004 ನೇ ಇಸ್ವಿಯಲ್ಲಿ ಬರೆದುಕೊಟ್ಟ ಜಿಪಿಎ ದರಲ್ಲಿ ಯಾವುದಾದರೂ ತಾಂತ್ರಿಕ ದೋಷ ಇದೆಯಾ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯರೇ 2 ನೇ ಜಿಪಿಎ ಯನ್ನು ಬರೆದುಕೊಟ್ಟು ಸಹಿ ಮಾಡಿ ಸೊಸ್ಾಯಟಿಯಲ್ಲಿ ಸಾಲ ಪಡೆದುಕೊ ಎಂದು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯರು 2017 ನೇ ಇಸ್ವಿಯಲ್ಲಿ ಬರೆದುಕೊಟ್ಟಂತಹ 2 ನೇ ಜಿಪಿಎ ದ್ದರ ಮೂಲಕ ದಾವಾಸ್ತಿಯ ಮೇಲೆ ದೊಡ್ಡ ಪ್ರಮಾಣದ ಸಾಲವನ್ನು ಪಡೆಯಬೇಕೆಂದು ಹುನ್ನಾರ ಮಾಡಿದ್ದೆನು ಎಂದರೆ ಸರಿಯಲ್ಲ. ಸದ್ರಿ ಸಂಗತಿಯ ಕುರಿತು ಪ್ರತಿವಾದಿಗಳಿಗೆ ತಿಳಿದು ಬಂದಿದ್ದರಿಂದ 2 ನೇ ಪ್ರತಿವಾದಿಯು ಈ ಮೊದಲು ಬರೆದುಕೊಟ್ಟ ಎರಡೂ ಜಿಪಿಎ ಗಳನ್ನು ರದ್ದುಪಡಿಸಿ ದಿಃ 11-05-2018 ರಂದು ನಿಮಗೆ ನೋಟಿಸನ್ನು ಜಾರಿಗೊಳಿಸಿರುತ್ತಾರೆ ಎಂದರೆ ನಿಜ. ಅದಾದ ನಂತರ ನೀವು ನಿಮ್ಮ ವಕೀಲರ ಮೂಲಕ ದಿಃ 23-01-2019 ರಂದು ನೋಟಿಸನ್ನು ಜಾರಿಗೊಳಿಸಿರುತ್ತಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಸದ್ರಿ ನೋಟಿಸನ್ನು ತೋರಿಸಲಾಗಿ ಸಾಕ್ಷಿಯು ಆ ನೋಟಿಸಿಗೆ ನಾನು ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದ್ರಿ ನೋಟಿಸನ್ನು ನಿಮಗೆ ಮಾಹಿತಿ ಇಲ್ಲದೆಯೇ ನಿಮ್ಮ ವಕೀಲರು ಕೊಟ್ಟಿರುತ್ತಾರೆಯೇ ಎಂದರೆ ಸಾಕ್ಷಿಯು ಜಿಪಿಎ ಗಳನ್ನು ಆರ್.ಎನ್. ಹೆಗಡೆ ವಕೀಲರೇ ಕ್ಯಾನ್ಸಲ್ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ದಿಃ 23-01-2019 ರಂದು ನೀಡಿದ

ನೋಟಿಸಿಗೆ 2 ನೇ ಪ್ರತಿವಾದಿಯು 01-02-2019 ರಂದು ವಿವರವಾದ ಉತ್ತರವನ್ನು ಅವರ ವಕೀಲರ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

2. ಪ್ರತಿವಾದಿಯರು ಮುಂಡಗೋಡಿಗೆ ವಾಸಿಸಲು ಬಂದಾಗ ಆರ್. ಎನ್. ಹೆಗಡೆಯವರ ಕಚೇರಿಯಲ್ಲಿ ದಿಃ 14-01-2019 ರಂದು ನಿಮ್ಮ ಮತ್ತು ಪ್ರತಿವಾದಿಯರ ಮಧ್ಯೆ ದಾವಾಸ್ತಿಯ ಕುರಿತು ಪಂಚಾಯತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ದಿನದಂದು ಆದ ರಾಜಿ ಪಂಚಾಯತಿಯ ರಾಜಿ ಪತ್ರದ ಮೂಲ ಪ್ರತಿಗಳಲ್ಲಿನ ಆರ್.ಎನ್. ಹೆಗಡೆ ವಕೀಲರು ನಿಮಗೆ ಒಂದು ಮೂಲ ಪ್ರತಿಯನ್ನು ಮತ್ತು ಪ್ರತಿವಾದಿಯರಿಗೆ ಒಂದು ಮೂಲ ಪ್ರತಿಯನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ. ಸದ್ರಿ ರಾಜಿ ಪಂಚಾಯತಿಯಲ್ಲಿ ಹಿರಿಯರಾದ ಚಿದಾನಂದ ಹರಿಜನ ಎಂಬುವರು ಮಧ್ಯಸ್ಥಿಕೆಯನ್ನು ವಹಿಸಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಸದ್ರಿ ರಾಜಿ ಪತ್ರದಲ್ಲಿ ನಮೂದಿಸಿದ ಸಂಗತಿಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**